## ಬುತ್ತಿ ಚಿಗುರು

### ಸಂಸಾರಿ

ರಮೇಶ ಪ್ರತಿದಿನ ದೇವಸ್ಥಾನಕ್ಕೆ ಹೋಗಿ, ಕೈಮುಗಿದು, ಅನಂತರ ಆಫೀಸಿಗೆ ಹೋಗುವ ಅಭ್ಯಾಸ ಇಟ್ಟುಕೊಂಡಿದ್ದ. ಅಂದು ದೇವಸ್ಥಾನಕ್ಕೆ ತೆರಳಿ ಹೊರಗೆ ಬರುವಾಗ ಮೆಟ್ಟಿಲ ಬಳಿ ಕುಳಿತಿದ್ದ ಭಿಕ್ಷುಕನಿಗೆ ಎರೆಡು ರೂಪಾಯಿ ಭಿಕ್ಷೆ ಹಾಕಿದ. ಅದರಿಂದ ಸಿಟ್ಟಿಗೆದ್ದ ಭಿಕ್ಷುಕ, 'ಮೊದಲೆಲ್ಲಾ ನೀವು ನನಗೆ ಹತ್ತತ್ತು ರೂಪಾಯಿ ಹಾಕ್ತಿದ್ರಿ. ಈಗೀಗ ಕಡಿಮೆ ಹಾಕ್ತಿದ್ದೀರಿ ಯಾಕೆ?' ಎಂದು ಪ್ರಶ್ನಿಸಿದ. ರಮೇಶ, 'ಆಗ ನಾನು ಒಬ್ಬಂಟಿಯಾಗಿದ್ದೆ. ಈಗ ಮದುವೆಯಾಗಿದ್ದೇನೆ. ನನ್ನ ಸಂಸಾರವನ್ನೂ ಸಾಕಬೇಕಲ್ವೇ?' ಎಂದುತ್ತರಿಸಿದ. ಅದಕ್ಕೆ ಭಿಕ್ಷುಕ, 'ನಾಚಿಕೆಯಾಗೋದಿಲ್ವಾ ನಿಮಗೆ? ನನ್ನ ದುಡ್ಡಿನಲ್ಲಿ ನಿಮ್ಮ ಸಂಸಾರ ಸಾಗಬೇಕಾ?' ಎಂದು ರೇಗಿದ.

**ಪ.ನಾ. ಹಳ್ಳಿ ಹರೀಶ್ ಕುಮಾರ್**





### ಮೂಳೆ ಮುರಿದಿದೆ...

ತಿಪ್ಪೇಸಿ ರಸ್ತೆ ದಾಟುತ್ತಿದ್ದಾಗ ವೇಗವಾಗಿ ಬಂದ ಕಾರೊಂದು ಅವನಿಗೆ ಗುದ್ದಿತು. ಕುಸಿದು ಬಿದ್ದ ತಿಪ್ಪೇಸಿಯನ್ನು ಅಲ್ಲಿನ ಜನರೇ ಆಸ್ಪತ್ರೆಗೆ ಸೇರಿಸಿದರು. ವೈದ್ಯರು ಅವನ ಕಾಲಿನ ಎಕ್ಸ್‌ರೇ ತೆಗೆಸಿದರು. ತಿಪ್ಪೇಸಿ ನೋವಿನಿಂದ ಒದ್ದಾಡುತ್ತಿದ್ದ. ಎಕ್ಸ್‌ರೇ ರಿಪೋರ್ಟ್ ನೋಡಿದ ವೈದ್ಯರು, 'ಎಕ್ಸ್‌ರೇಯಲ್ಲಿ ನಿಮ್ಮ ಕಾಲಿನ ಮೂಳೆ ಮುರಿದಿರುವುದು ಗೊತ್ತಾಗ್ತಿದೆ' ಎಂದರು. ಅದಕ್ಕೆ ತಿಪ್ಪೇಸಿ, 'ಸದ್ಯ ದೇವರು ದೊಡ್ಡವನು, ಕಾಲಿನ ಮೂಳೆ ಮುರಿದಿರುವುದು ಎಕ್ಸ್‌ರೇಯಲ್ಲಿ ತಾನೆ... ನನ್ನ ಕಾಲಿನಲ್ಲಿ ಅಲ್ಲವಲ್ಲ. ಚಿಂತೆಯಿಲ್ಲ ಬಿಡಿ' ಎಂದ.

**ಎಂ.ಕೆ.ಮಂಜುನಾಥ್**